(ಇಂದು ದಿನಾಂಕ 17.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲು:- 4ನೇ ಪ್ರತಿವಾದಿ ಪರ ಶ್ರೀ. ಟಿ ಎನ್ ಆರ್ ವಕೀಲರಿಂದ:-**

ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ನಾನೇ ಹೇಳಿ ತಯಾರು ಮಾಡಿಸಿರುತ್ತೇನೆ. ಪ್ರಮಾಣ ಪತ್ರದಲ್ಲಿ ಬರೆದ ವಿಷಯ ನನಗೆ ಗೊತ್ತಿದೆ. ಈ ದಾವೆಯನ್ನು ಕೆಂಚಪ್ಪರವರು ಅಬ್ದುಲ್ ಅಲೀಂ ರವರ ಮೇಲೆ ದಾವೆ ಹಾಕಿರುತ್ತಾರೆ. 2006 ರಲ್ಲಿ ಅಬ್ದುಲ್ ಅಲೀಂ ರವರ ಹೆಸರಿಗೆ ಖಾತೆ ಬದಲಾವಣೆ ಆಗಿರುವುದನ್ನು ನೋಡಿ ಈ ದಾವೆ ಹಾಕಿರುತ್ತಾರೆ. ದಾವಾ ಆಸ್ತಿಗೆ ಸಂಬಂಧಿಸಿದಂತೆ ದಾಖಲಾತಿಗಳನ್ನು ನಾನು ಖುದ್ದಾಗಿ ನೋಡಿರುವುದಿಲ್ಲ. ಈ ದಾವೆ ಹಾಕಿರುವ ವಿಚಾರ ನನಗೆ 2006 ರಲ್ಲಿ ಗೊತ್ತಾಗಿರುತ್ತದೆ. ವಾದಿ ನನಗೆ ದಾವೆ ಹಾಕಿದ ಬಗ್ಗೆ ಹೇಳಿದ್ದರು. ವಾದಿ ಮುನಿರಾಜು ನನಗೆ ಈ ದಾವೆಯಲ್ಲಿ ಸಾಕ್ಷಿ ಹೇಳಬೇಕು ಎಂದು ಒಂದು ವರ್ಷದ ಹಿಂದೆ ಹೇಳಿದ್ದರು. ದಾವಾ ಆಸ್ತಿ ಸರ್ವೆ ನಂ. 75/4 ವಿಸ್ತೀರ್ಣ 1 ಎಕರೆ 8 ಗುಂಟೆ ಇರುತ್ತದೆ. ದಾವಾ ಆಸ್ತಿಯ ಪೂರ್ವಕ್ಕೆ ಮದ್ದೂರಪ್ಪರವರ ಜಮೀನು, ಪಶ್ಚಿಮಕ್ಕೆ ಮುನಿನಾಗಪ್ಪ ಮತ್ತು ಕಾಕಯ್ಯರವರ ಜಮೀನು, ಉತ್ತರಕ್ಕೆ ಅಶ್ವತನಾರಾಯಣಸ್ವಾಮಿ ರವರ ಜಮೀನು, ದಕ್ಷಿಣಕ್ಕೆ ಪೂಜಾರಿ ಕಾಳಪ್ಪರವರ ಜಮೀನು ಇರುತ್ತದೆ. ಮದ್ದೂರಪ್ಪ , ಮುನಿನಾಗಪ್ಪ , ಅಶ್ವತನಾರಾಯಣಸ್ವಾಮಿ , ಪೂಜಾರಿ ಕಾಳಪ್ಪರವರ ಜಮೀನುಗಳ ಸರ್ವೆ ನಂಬರ್ ಗೊತ್ತಿಲ್ಲ. ಗಗನದೊಡ್ಡಿ ಗ್ರಾಮದಿಂದ ಸಿಡಿಹೊಸಕೋಟೆ ಗ್ರಾಮಕ್ಕೆ 10 ಕಿಲೋಮೀಟರ್ ದೂರ ಇರುತ್ತದೆ. ಮುನಿಸ್ವಾಮಪ್ಪರವರಿಂದ ವಾದಿ ಖರೀದಿ ಮಾಡಿದ ಕ್ರಯಪತ್ರವನ್ನು ನಾನು ನೋಡಿರುವುದಿಲ್ಲ. ವಾದಿಯರು ದಾವಾ ಆಸ್ತಿಯನ್ನು ಖರೀದಿ ಮಾಡಿದ್ದೇನೆ ಎಂದು ನನಗೆ ಹೇಳಿದ್ದರು. ವಾದಿಯು ದಾವಾ ಆಸ್ತಿಯನ್ನು ಖರೀದಿ ಮಾಡಿದ್ದೇನೆ ಎಂದು ಜಮೀನನ್ನು ತೋರಿಸಿದ ಆಧಾರದಲ್ಲಿ ನಾನು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿ. 4ನೇ ಪ್ರತಿವಾದಿಯ ಹೆಸರಿಗೆ ಕಂದಾಯ ದಾಖಲೆಗಳು ಅಕ್ರಮವಾಗಿ ಮಾಡಿಕೊಂಡಿದ್ದರು ಎಂದು ವಾದಿ ಕೆಂಚಪ್ಪ ಅವರ ಜೀವಿತ ಕಾಲದಲ್ಲಿ ನನಗೆ ಹೇಳಿದ್ದರು. ವಾದಿ ಮುನಿರಾಜು ರಾಜಕೀಯದಲ್ಲಿ ಇರುತ್ತಾರೆ ಎಂದರೆ ಸರಿ. ನನ್ನ ಮಕ್ಕಳು ಮುನಿರಾಜುವಿಗೆ ರಾಜಕೀಯವಾಗಿ ಸಹಾಯ ಮಾಡುತ್ತಾರೆ ಎಂದರೆ ಸರಿಯಲ್ಲ. ವಾದಿ ಮುನಿರಾಜು ಮತ್ತು ನನ್ನ ಮಕ್ಕಳ ಕೋರಿಕೆಯ ಮೇರೆಗೆ ನಾನು ನ್ಯಾಯಾಲಯದಲ್ಲಿ ಬಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಮತ್ತು ವಾದಿಯ ಮಕ್ಕಳು ಯಾವತ್ತೂ ದಾವಾ ಆಸ್ತಿಯ ಸ್ವಾದೀನದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿಯರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಿನಾಂಕ 07.05.2004 ರಂದು 4ನೇ ಪ್ರತಿವಾದಿಯು ದಾವಾ ಆಸ್ತಿಯನ್ನು ಖರೀದಿ ಮಾಡಿ ಅಂದಿನಿಂದ 4ನೇ ಪ್ರತಿವಾದಿಯೇ ದಾವಾ ಆಸ್ತಿಯ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ವಾದಿ ಮುನಿರಾಜುರವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ- ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ,
ಆನೇಕಲ್.